**ದಿನಾಂಕ:02.03.2018ರ ಶುಕ್ರವಾರದಂದು ಅಪರಾಹ್ನ 3.00ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ 2018-19ನೇ ಸಾಲಿನ ಆಯವ್ಯಯ (ಬಡ್ಜೆಟ್) ಮಂಡನೆ ಹಾಗೂ ಸಾಮಾನ್ಯ ಸಭೆಯ ನಡಾವಳಿ.**

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಮಾನ್ಯ ಶ್ರೀ ಎ.ಸಿ. ದೇವಯ್ಯರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 2 | ಮಾನ್ಯ ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 2. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 3 | ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರು ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 3 | ಮಾನ್ಯ ಶ್ರೀ ಎಂ.ಪಿ.ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. |
| 4 | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | 4 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 5 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 6 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 6 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 7 | ಆಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | 7 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ |
| 8 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು | 8 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |
| 9 | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ | | |
| 10 | ಕು॥ ಸೌಮ್ಯ. ಎಂ.ಎಸ್. ಆಯುಕ್ತರು(ಪ್ರ),<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು ಮತ್ತು ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರುಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. . . .

**<u>1) ವಿಷಯ ಸಂಖ್ಯೆ : 1</u>**

ಹಿಂದಿನ ಸಭೆಯ ಅಂದರೆ ದಿನಾಂಕ: 08.12.2017 ರಂದು ನಡೆದ ಪ್ರಾಧಿಕಾರದ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–**ಸಭೆಯಲ್ಲಿ ನಡಾವಳಿಯನ್ನು ಓದಲಾಯಿತು. ಅದರಲ್ಲಿನ ವಿಷಯ ಸಂಖ್ಯೆ: 6, 9 ಮತ್ತು 12ನ್ನು ಹೊರತಪಡಿಸಿ ಉಳಿದಂತೆ ಹಿಂದಿನ ಸಭೆಯ ನಡಾವಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ಹಿಂದಿನ ಸಭೆಯ 6, 9 ಮತ್ತು 12ರ ವಿಷಯವನ್ನು ಈ ಸಭೆಯಲ್ಲಿ ಮತ್ತೆ ಪ್ರಸ್ತಾಪಿಸಿದಂತೆ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ.**

**<u>ವಿಷಯಸಂಖ್ಯೆ 6:–</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 81/8 ರಲ್ಲಿನ 1.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ಕಾಟೇಜ್ ನಿರ್ಮಿಸುವ) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಡಿ.ಕೆ. ಮಂಜುನಾಥ್ ಮತ್ತು ಶ್ರೀ ಡಿ.ಕೆ. ಗುರುರಾಜ್ ಬಿನ್॥ ಡಿ.ಎಸ್. ಕೋದಂಡ ರಾಮ, 4ನೇ ವಾರ್ಡ್, 2ನೇ ಬ್ಲಾಕ್, ಕುಶಾಲನಗರ, ಸೊಮವಾರಪೇಟೆ ತಾಲ್ಲೂಕು ರವರು ಕೋರಿರುತ್ತಾರೆ.**

**<u>ಟಿಪ್ಪಣಿ :–</u>** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 6.50 ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಮತ್ತು ಕಾಟೇಜ್) ಭೂ–ಉಪಯೋಗ ಬದಲಾವಣೆ ಮಾಡುವುದರಿಂದ ಸುತ್ತಮುತ್ತಲಿನ ಜನರಿಗೆ ಉದ್ಯೋಗ ಸೃಷ್ಠಿಸುವುದರ ಜೊತೆಗೆ ಪ್ರವಾಸೋದ್ಯಮ ದೃಷ್ಠಿಯಿಂದ ಉಪಯೋಗವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಮತ್ತು ಕಾಟೇಜ್) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 01–07–2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**<u>ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–</u>** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1)2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 6.50ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 6.00ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ

ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ನಿರ್ಣಯ:–** ಸದರಿ ಪ್ರಸ್ತಾವನೆಯನ್ನು ಹಿಂದಿನ ಸಭೆಯಲ್ಲಿ ತಿರಸ್ಕರಿಸಿದ್ದರೂ ಮತ್ತೊಮ್ಮೆ ಪ್ರಸ್ತಾಪಿಸಿ ಪ್ರವಾಸಿ ಕೇಂದ್ರವಾದ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಇತರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಪ್ರವಾಸೋದ್ಯಮವನ್ನು ಬೆಳೆಸುವ ಹಿತದೃಷ್ಟಿಯಿಂದ ಮೇಕೇರಿ ಗ್ರಾಮದ ಸರ್ವೆ ನಂ. 81/8 ರಲ್ಲಿನ 1.50 ಎಕರೆ ವಿಸ್ತೀರ್ಣದ ಜಮೀನನ್ನು ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ಕಾಟೇಜ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 9:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 192/46 ರಲ್ಲಿನ 0.30ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಪಿ.ಡಿ. ಪೊನ್ನಪ್ಪ ಬಿನ್॥ಪೌ॥ ದೇವಯ್ಯ, ಪಿ.ಸಿ.ನಿಲಯ, ಮಂಗಳೂರು ರಸ್ತೆ, ಮಡಿಕೇರಿ ರವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 6.0ಮೀ ಅಗಲದ ರಸ್ತೆಯಿಂದ, ದಕ್ಷಿಣದಲ್ಲಿ ಹಾಲಿ 6.0ಮೀ ಅಗಲದ ರಸ್ತೆಯಿಂದ ಹಾಗೂ ಪೂರ್ವದಲ್ಲಿ ಹಾಲಿ 5.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ಹೋಟೆಲ್ ನಿರ್ಮಾಣ ಮಾಡುವುದರಿಂದ ಸ್ಥಳಿಯರಿಗೆ ಉದ್ಯೋಗ ಕಲ್ಪಿಸುವ ಮತ್ತು ಕೊಡಗು ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡಿಕೊಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಟೆಲ್ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 15–07–2017 ರಂದು ವಿಜಯ ಕರ್ನಾಟಕ ಮತ್ತು ಪ್ರಜಾಸತ್ಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 4.0ಮೀ ಅಗಲದ ರಸ್ತೆಯಿಂದ, ದಕ್ಷಿಣದಲ್ಲಿ ಹಾಲಿ 6.0 ಮೀ ಅಗಲದ ರಸ್ತೆಯಿಂದ ಹಾಗೂ ಪೂರ್ವದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ

(Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 6.0 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಆದಕಾರಣ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**<u>ನಿರ್ಣಯ:–</u>** ಸದರಿ ಪ್ರಸ್ತಾವನೆಯನ್ನು ಹಿಂದಿನ ಸಭೆಯಲ್ಲಿ ತಿರಸ್ಕರಿಸಿದ್ದರೂ ಮತ್ತೊಮ್ಮೆ ಪ್ರಸ್ತಾಪಿಸಿ ಪ್ರವಾಸಿ ಕೇಂದ್ರವಾದ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಇತರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಪ್ರವಾಸೋದ್ಯಮವನ್ನು ಬೆಳೆಸುವ ಹಿತದೃಷ್ಟಿಯಿಂದ ಕಾಟಕೇರಿ ಗ್ರಾಮದ ಸರ್ವೆ ನಂಬರ್ 192/46 ರಲ್ಲಿನ 0.30 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**<u>12)ವಿಷಯಸಂಖ್ಯೆ 12:–</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 10/44 ರಲ್ಲಿನ 3.00ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ವಿಹಾರ ಧಾಮ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಸ್.ಪರಮಶಿವ ಮತ್ತು ಪಿ.ಶೀಲಾ ಕೋಂ॥ಪರಮಶಿವ, ಮಗ್ಗುಲ ಗ್ರಾಮ, ವಿರಾಜಪೇಟೆ ತಾಲ್ಲೂಕು ಇವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹಕ್ಕೆ ಅತ್ಯಂತ ಸಮೀಪದಲ್ಲಿರುವುದು ಕಂಡು ಬಂದಿರುತ್ತದೆ ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ವಿಹಾರ ಧಾಮ ನಿರ್ಮಾಣ ಮಾಡುವುದರಿಂದ 1)ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಲಭಿಸುವ 2)ಪ್ರವಾಸಿಗರಿಗೆ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡುವ 3)ಬಂಡವಾಳ ಹೂಡಿಕೆಯಿಂದ ಕ್ಷೇತ್ರದ ಅಭಿವೃದ್ಧಿಗೊಳಿಸುವ, 4)ಜಿಲ್ಲೆಗೆ ಬಂಡವಾಳ ಹರಿದು ಬರುವ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ವಿಹಾರ ಧಾಮ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 05.08.2017 ರಂದು ಹೊಸ ದಿಗಂತ ಮತ್ತು ದಿನಾಂಕ:17.08.2017ರಂದು ಕಾವೇರಿ ಟೈಮ್ಸ್ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 5.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹದ ಅಂಚಿನಿಂದ ಕೇವಲ

10–15ಮೀ ಅಂತರದಲ್ಲಿರುವ ಕಾರಣ ಸದರಿ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವುದು ಸೂಕ್ತವಾಗಿರುವುದಿಲ್ಲ. ಅಲ್ಲದೆ ಈ ಪರಿಮಿತಿಯಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಅನುಮೋದಿಸುವ ಮುನ್ನ ಕಾರಾಗೃಹ/ಪೋಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಸೂಕ್ತವೆಂದು ನ.ಯೋ.ಸದಸ್ಯರು ಅಭಿಪ್ರಾಯ ಪಡಲಾಗಿದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 5.0ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಆದಕಾರಣ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹದ ಹತ್ತಿರ ಬರುತ್ತಿರುವುದರಿಂದ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಕಾರಾಗೃಹ/ಪೋಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಿ ಕೃಷಿ ವಲಯದ ಜಮೀನನ್ನು ವಾಣಿಜ್ಯ ಉಪಯೋಗಕ್ಕೆ (ವಿಹಾರ ಧಾಮ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಲು ಸಭೆಯು ಬಹುಮತದ ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ 2:–**

ನವೆಂಬರ್ 2017ನೇ ತಿಂಗಳಿನಿಂದ ಜನವರಿ–2018ನೇ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 31,415.00 |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 6,095.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 18,219.00 |
| 4 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 2,000.00 |
| 5 | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ<br>1. ಇಂಡಿಯನ್ ಬ್ಯಾಂಕು | ರೂ. | 1,05,755.00 |
| | 2. ಇಂಡಿಯನ್ ಬ್ಯಾಂಕು (ಅಕ್ರಮ – ಸಕ್ರಮ) | ರೂ. | 2,379.00 |
| | 3. ಕಾವೇರಿ ಗ್ರಾಮೀಣ ಬ್ಯಾಂಕು (ಪಾರ್ಕ್ ಮತ್ತು ಸಿ.ಎ) | ರೂ. | 19,635.00 |
| 6 | ಕಾವೇರಿ ಗ್ರಾಮೀಣ ಬ್ಯಾಂಕು (ಪಾರ್ಕ್ ಮತ್ತು ಸಿ.ಎ)<br>1. ಠೇವಣಿ ಫಲಪ್ರದಗೊಂಡು ಉಳಿತಾಯ ಖಾತೆಗೆ ಮರು ಜಮೆ | ರೂ. | 27,29,653.00 |
| | 2. ಟಿ.ಡಿ.ಎಸ್. ಮರು ಜಮೆ | ರೂ. | 14,628.00 |
| 7 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಶುಲ್ಕ ಪಾವತಿಸಿರುವುದು | ರೂ. | 309.00 |
| 8 | ಇತರೆ ಮೂಲಗಳಿಂದ ಬಂದಿರುವ ಶುಲ್ಕ | ರೂ. | 458.00 |
| | **ಒಟ್ಟು ಜಮೆ** | **ರೂ.** | **29,30,546.00** |

**ಖರ್ಚು**

| | | | |
|---|---|---|---|
| 1 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 88,059.00 |
| 2 | ಸಿಬ್ಬಂದಿ ವೇತನ | ರೂ. | 1,18,812.00 |
| 3 | ಕಂಪ್ಯೂಟರ್ ವೆಬ್‌ಸೈಟ್ ನಿರ್ವಹಣೆ (ಪ್ರೀಮಿಯರ್ ಟೆಕ್ನಾಲಜಿ, ಬೆಂಗಳೂರುರವರಿಗೆ) ಪಾವತಿ | ರೂ. | 5,000.00 |
| 4 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 1,366.00 |
| 5 | ದೂರವಾಣಿ ವೆಚ್ಚ | ರೂ. | 3,838.00 |
| 6 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 1,720.00 |
| 7 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 4,640.00 |
| 8 | ಮುದ್ರಣ ವೆಚ್ಚ | ರೂ. | 11,480.00 |
| 9 | ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಫಲಪ್ರದಗೊಂಡಿರುವ ಠೇವಣಿ ಹಣವನ್ನು ಮರು ಹೂಡಿಕೆ ಮಾಡಿರುವುದು. | ರೂ. | 27,48,957.00 |
| | **ಒಟ್ಟು ವೆಚ್ಚ** | **ರೂ.** | **29,83,872.00** |

**ಘೋಷ್ವಾರೆ:**

| | | | |
|---|---|---|---|
| 1 | 2017ನೇ ನವೆಂಬರ್ ತಿಂಗಳಿನ ಆರಂಭಿಕ ಶಿಲ್ಕು | ರೂ. | 2,34,35,824.00 |
| 2 | 2017ನೇ ನವೆಂಬರ್ ತಿಂಗಳಿನಿಂದ ಜನವರಿ 2018 ರವರೆಗಿನ ಜಮೆ | ರೂ. | 29,30,546.00 |
| 3 | ಒಟ್ಟು ಜಮೆ | ರೂ. | **2,63,66,370.00** |
| 4 | 2017ನೇ ನವೆಂಬರ್ ತಿಂಗಳಿನಿಂದ ಜನವರಿ 2018 ರವರೆಗಿನ ಖರ್ಚು | ರೂ. | 29,83,872.00 |
| 5 | 2018ನೇ ಜನವರಿ ತಿಂಗಳ ಆಖೈರು ಶಿಲ್ಕು | ರೂ. | **2,33,82,498.00** |
| 6 | ಠೇವಣಿ ಇಟ್ಟಿರುವುದು | ರೂ. | **1,56,94,461.00** |
| | **ಒಟ್ಟು ಮೊಬಲಗು** | **ರೂ.** | **3,90,76,959.00** |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** ನವೆಂಬರ್–2017ನೇ ತಿಂಗಳಿನಿಂದ ಜನವರಿ–2018 ರವರೆಗಿನ ಜಮಾ ಮತ್ತು ಖರ್ಚುಗಳಿಗೆ ಸಭೆಯು ಪರಿಶೀಲಿಸಿ, ಅಂಗೀಕಾರ ನೀಡಿತು.

**3) ವಿಷಯ ಸಂಖ್ಯೆ 3:– 2018–19ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು (ಬಡ್ಜೆಟ್) ಸಭೆಯಲ್ಲಿ ಅಂಗೀಕರಿಸುವ ಬಗ್ಗೆ.**

**ಟಿಪ್ಪಣಿ:–** ಅಂದಾಜು ಆಯವ್ಯಯದ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

**ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ**
**2018–19ನೇ ಸಾಲಿನ ಅಂದಾಜು ಜಮೆಯ ಆಯವ್ಯಯ (ಬಡ್ಜೆಟ್) ವಿವರ**

| ಕ್ರ. ಸಂ | ಜಮೆಯ ವಿವರ | 2015–16ನೇ ಸಾಲಿನ ಜಮೆ | 2016–17ನೇ ಸಾಲಿನ ಜಮೆ | 2017–18ನೇ ಸಾಲಿನ ಜಮೆ | 2018–19ನೇ ಸಾಲಿನ ನಿರೀಕ್ಷಿತ ಅಂದಾಜು ಜಮೆ |
|---|---|---|---|---|---|
| 1 | ಪರಿಶೀಲನಾ ಶುಲ್ಕ | 7,05,278.00 | 23,85,997.00 | 5,75,000.00 | **10,00,000.00** |

| | | | | | |
|---|---|---|---|---|---|
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18 ರಲ್ಲಿ ಸಂಗ್ರಹಿಸಲಾದ ಶುಲ್ಕ | 2,01,450.00 | 18,56,659.00 | 3,00,000.00 | **5,00,000.00** |
| 3 | ಕೆರೆ ಅಭಿವೃದ್ಧಿ ಶುಲ್ಕ | 14,13,258.00 | 49,30,582.00 | 7,50,000.00 | **10,00,000.00** |
| 4 | ಎಲ್ಲಾ ಬ್ಯಾಂಕ್‌ಗಳ ಉಳಿತಾಯ ಖಾತೆಯಲ್ಲಿರುವ ಬಡ್ಡಿ | 4,84,511.00 | 3,14,496.00 | 9,50,000.00 | 12,00,000.00 |
| 5 | ಟೆಂಡರ್ ಫಾರಂ ಶುಲ್ಕ+ಟೆಂಡರ್ ಠೇವಣಿ ಶುಲ್ಕ | - | - | - | 2,00,000.00 |
| 6 | ಮಾಹಿತಿ ಹಕ್ಕು ಅಧಿನಿಯಮ 200ರಡಿ ಪಾವತಿಸಿಕೊಂಡಿರುವ ಶುಲ್ಕ | 2,680.00 | 1,093.00 | 1,000.00 | 5,000.00 |
| 7 | ಹೆಚ್ಚುವರಿಯಾಗಿ ಪಾವತಿಸಿದ್ದ ಟಿ.ಡಿ.ಎಸ್. ಮತ್ತು ಠೇವಣಿ ಮೇಲಿನ ಟಿ.ಡಿ.ಎಸ್. ಮರು ಜಮೆ | - | 24,029.00 | 30,000.00 | 50,000.00 |
| 8 | ಇಂಜಿನಿಯರವರಿಗೆ ಪರವಾನಿಗೆ ನೀಡುವ ನವೀಕರಿಸುವ ಶುಲ್ಕ | 20,000.00 | 26,000.00 | 30,000.00 | 40,000.00 |
| 9 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | 83,42,245.45 | - | - | - |
| 10 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | 50,00,000.00 | - | - | - |
| 11 | ಸಿಬ್ಬಂದಿಯವರಿಗೆ ಹೆಚ್ಚುವರಿಯಾಗಿ ಪಾವತಿಸಿದ್ದ ವೇತನವನ್ನು ಮರು ಜಮೆ ಮಾಡಿರುವುದು. | 11,596.00 | - | - | - |
| 12 | ಸಮಾಜ ಕಲ್ಯಾಣ ಇಲಾಖೆಯಿಂದ ಪಾವತಿ (ಸಿ.ಎ. ನಿವೇಶನ ಮಂಜೂರಾತಿ ಕೋರಿ) | - | - | 30,35,250.00 | 15,00,000.00 |
| 13 | ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಶ್ರೀ ಡಿ.ಹೆಚ್.ಮೊಯಿದುರವರು ಪಾವತಿಸಿರುವ ಶುಲ್ಕ. | - | - | 25,000.00 | - |
| 14 | ಇತರೆ ಮೂಲಗಳಿಂದ ಬರುವ ಆದಾಯ | 3,670.00 | 2,566.00 | 5,000.00 | 5,000.00 |
| **ಒಟ್ಟು** | | 1,61,84,688.00 | 95,41,422.00 | 57,01,250.00 | **55,00,000.00** |

## 2018-19ನೇ ಸಾಲಿನ ಅಂದಾಜು ಖರ್ಚುಗಳ ವಿವರ

| **ಕ್ರ. ಸಂ** | **ಖರ್ಚುಗಳ ವಿವರ** | 2015-16ನೇ ಸಾಲಿನ ಖರ್ಚು | 2016-17ನೇ ಸಾಲಿನ ಖರ್ಚು | 2017-18ನೇ ಸಾಲಿನ ಖರ್ಚು | **2018-19ನೇ ಸಾಲಿನ ನಿರೀಕ್ಷಿತ ಖರ್ಚು** |
|---|---|---|---|---|---|
| 1 | ಅಧ್ಯಕ್ಷರ ಗೌರವಧನ, ಇತರೆ ಭತ್ಯೆ | 3,38,890.00 | 1,95,921.00 | 3,25,550.00 | **5,00,000.00** |

| | | | | | |
|---|---|---|---|---|---|
| 2 | ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು (ಪ್ರಭಾರ ಭತ್ಯೆ) | 25,296.00 | 25,296.00 | 2,108.00 | **6,00,000.00** |
| 3 | ಪಿಂಚಣಿ ವಂತಿಕೆ (ಹಿಂದಿನ ಆಯುಕ್ತರಾದ ಶ್ರೀ ಎಲ್ ಶಿವಮಲ್ಲುರವರಿಗೆ ಪರಿಷ್ಕೃತ ವೇತನ ವ್ಯತ್ಯಾಸ ಪಾವತಿ.(ನವೆಂಬರ್ 2000 ರಿಂದ 2003ರ ಡಿಸೆಂಬರ್ ವರೆಗೆ) | - | 3,15,829.00 | - | **4,00,000.00** |
| 4 | ಸಿಬ್ಬಂದಿ ವೇತನ | 3,38,880.00 | =4,04,391.00 | 4,65,000.00 | **6,00,000.00** |
| 5 | ದೂರವಾಣಿ ವೆಚ್ಚ | 16,422.00 | 24,713.00 | 24,000.00 | **50,000.00** |
| 6 | ವಿದ್ಯುಚ್ಛಕ್ತಿ ವೆಚ್ಚ | 10,041.00 | 11,983.00 | 10,000.00 | **20,000.00** |
| 7 | ದಿನಪತ್ರಿಕೆ ಖರೀದಿ ವೆಚ್ಚ | 5,400.00 | - | 3,000.00 | **10,000.00** |
| 8 | ಪ್ರಯಾಣ ಭತ್ಯೆ | 2,500.00 | 2,600.00 | 15,000.00 | **25,000.00** |
| 9 | ಮುದ್ರಣ ವೆಚ್ಚ | 20,820.00 | 20,920.00 | 36,750.00 | **50,000.00** |
| 10 | ವಕೀಲರ ಶುಲ್ಕ ಪಾವತಿ | - | 10,000.00 | 2,00,000.00 | **2,00,000.00** |
| 11 | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | 21,863.00 | 21,175.00 | 15,000.00 | **25,000.00** |
| 12 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 21,107.00 | 21,593.00 | 22,308.00 | **30,000.00** |
| 13 | ರಾಷ್ಟ್ರೀಯ ಹಬ್ಬದ ವಂತಿಕೆ ಜಿಲ್ಲಾಧಿಕಾರಿಯವರಿಗೆ ಪಾವತಿ | 13,000.00 | 13,000.00 | 13,000.00 | **15,000.00** |
| 14 | ಸಭಾ ಉಪಾಹಾರ ವೆಚ್ಚ | 3,285.00 | 4,690.00 | 4,250.00 | **10,000.00** |
| 15 | ಅಂಚೆ ಚೀಟಿ ಖರೀದಿ | 2,000.00 | 1,000.00 | 4,000.00 | **10,000.00** |
| 16 | ಕಚೇರಿಗೆ ಹೊಸ ನಾಮಫಲಕ ಅಳವಡಿಸಿ ಹೆಸರು ಬರೆದಿರುವ ಬಾಬ್ತು ಖರ್ಚು | - | 15,900.00 | - | **5,000.00** |
| 17 | ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಜಮೆಯಾಗಿದ್ದ ಕೆ.ಟಿ.ಸಿ.ಪಿ.ಕಾಯ್ದೆ ಕಲಂ 18ರಡಿ ಪಾವತಿಸಿದ್ದ ಶುಲ್ಕವನ್ನು ಇಂಡಿಯನ್ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು. | - | 4,54,248.00 | - | - |
| 18 | ಎಸೆಫ್ ಅಸೋಷಿಯೇಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್, ಮಡಿಕೇರಿ (ಇನ್‌ಕಮ್ ಟ್ಯಾಕ್ಸ್ ಫೈಲ್ ಮಾಡಿರುವುದು) | - | 2,250.00 | - | **10,000.00** |
| 19 | ಕೆ.ಟಿಸಿ.ಪಿ ಕಾಯ್ದೆ ಕಲಂ 18ರಲ್ಲಿ ಸಂಗ್ರಹಿಸಲಾದ ಶುಲ್ಕದ ಶೇ.5 ನಗರ ಯೋಜನಾ ಮಂಡಳಿಗೆ ಪಾವತಿ | 1,22,446.00 | - | 92,682.00 | **1,00,000.00** |
| 20 | ಕಚೇರಿ ಉಪಯೋಗಕ್ಕೆ ಪಿಠೋಪಕರಣಗಳ ಖರೀದಿ | - | 22,785.00 | 41,000.00 | **25,000.00** |
| 21 | ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆ ಅಭಿವೃದ್ಧಿ/ದುರಸ್ಥಿ ವೆಚ್ಚ | - | - | - | **20,00,000.00** |

| | | | | | |
|---|---|---|---|---|---|
| 22 | ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನವನದವರೆಗೆ ವಿದ್ಯುತ್ ಲ್ಯಾಂಪ್‌ಗಳನ್ನು ಅಳವಡಿಸುವ ಬಗ್ಗೆ ವೆಚ್ಚ | - | - | - | **20,00,000.00** |
| 23 | ಬೇರೆ ಖಾತೆಯಿಂದ ಪ್ರಾಧಿಕಾರದ ನಿಧಿಗೆ ಮಾರ್ಚ್ 2017ರಂದು ಜಮೆ ಆಗಿದ್ದ ಟಿ.ಡಿ.ಎಸ್. ಹಣ ವಾಪಾಸು ಆ ಖಾತೆಗೆ ಜಮಾ ಆಗಿರುವುದು | - | - | 42,027.00 | **-** |
| 24 | ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕಣೆಗಳು, ಜೆರಾಕ್ಸ್ ಮಿಷನ್, ಯು.ಪಿ.ಎಸ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮಿಷಿನ್ ಖರೀದಿ ವೆಚ್ಚ/ ವೆಬ್ ಸೈಟ್ ನವೀಕರಣ ಮತ್ತು ನಿರ್ವಹಣೆ | 35,183.00 | 19,871.00 | 15,000.00 | **3,00,000.00** |
| 25 | ಟಿ.ಡಿ.ಎಸ್. ಪಾವತಿ (ಗದ್ದಿಗೆ + ಇತರೆ) | 41,480.00 | - | - | 5,000.00 |
| 26 | ಸೇಲ್ಸ್ ಟ್ಯಾಕ್ಸ್ ಪಾವತಿ (ಗದ್ದಿಗೆ + ಇತರೆ) | 82,961.00 | - | - | 5,000.00 |
| 27 | ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿ (ಗದ್ದಿಗೆ + ಇತರೆ) | 25,642.00 | - | - | 5,000.00 |
| 28 | ರಾಯಲ್ಟಿ (ಗದ್ದಿಗೆ + ಇತರೆ) | 9,605.00 | - | - | 25,000.00 |
| 29 | ಗದ್ದಿಗೆಯಲ್ಲಿಉದ್ಯಾನವನ ಅಭಿವೃದ್ಧಿ/ ನಿರ್ವಹಣೆ, ಹೆಚ್ಚುವರಿ ಕಾಮಗಾರಿ, ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ ಮತ್ತು ಇತರೆ ವೆಚ್ಚ | 17,82,323.00 | - | - | - |
| 30 | ಗದ್ದಿಗೆ ಉದ್ಯಾನವನದ ಹೆಚ್ಚುವರಿ ಕಾಮಗಾರಿಗಳ ಬಾಬ್ತು ಠೇವಣಿ ಇಟ್ಟಿದ್ದ ಇ.ಎಂ.ಡಿ. ಹಣವನ್ನು ಗುತ್ತಿಗೆದಾರರಾದ ಶ್ರೀ ಸದಾಶಿವ ರೈ ರವರಿಗೆ ಪಾವತಿ | - | - | 66,250.00 | 1,50,000.00 |
| 31 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | 83,42,245.45 | - | - | - |
| 32 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | 50,00,000.00 | - | - | - |
| 33 | ಇತರೆ ವೆಚ್ಚ | 160.00 | 475.00 | - | 5,000.00 |
| | **ಒಟ್ಟು** | 1 ,62,61,549.00 | 15,88,640.00 | 13,96,925.00 | **71,80,000.00** |

**<u>ಘೋಶ್ವಾರೆ:</u>**

| | | | |
|---|---|---|---|
| | 2017-18ನೇ ಸಾಲಿನ ವಾರ್ಷಿಕ ಘೋಶ್ವಾರೆ | | |
| 1. | **2017-18ನೇ ಸಾಲಿನ ಆರಂಭಿಕ ಶಿಲ್ಕು** | ರೂ. | **1,94,21,497.00** |
| 2. | 2017-18ನೇ ಸಾಲಿನ ಜಮೆ | ರೂ. | 57,01,250.00 |
| 3. | **2017-18ನೇ ಸಾಲಿನ ಒಟ್ಟು ಜಮೆ** | ರೂ. | **2,51,22,747.00** |
| 4. | 2017-18ನೇ ಸಾಲಿನ ಖರ್ಚು | ರೂ. | 13,96,925.00 |
| 5. | **2017-18ನೇ ಸಾಲಿನ ಆಖೈರು ಶಿಲ್ಕು (31.03.2018ರ ಅಂತ್ಯಕ್ಕೆ)** | ರೂ. | **2,37,25,822.00** |
| | 2018-19ನೇ ಸಾಲಿನ ಅಂದಾಜು ಆಯವ್ಯಯದ ಘೋಶ್ವಾರೆ ವಿವರ | | |
| **1.** | **2018-19ನೇ ಸಾಲಿನ ಆರಂಭಿಕ ಶಿಲ್ಕು** | ರೂ. | **2,37,25,822.00** |
| 2. | 2018-19ನೇ ಸಾಲಿನ ಅಂದಾಜು ಜಮೆ | ರೂ. | 55,00,000.00 |
| **3.** | **2018-19ನೇ ಸಾಲಿನ ಅಂದಾಜು ಒಟ್ಟು ಜಮೆ** | ರೂ. | **2,92,25,822.00** |
| 4. | 2018-19ನೇ ಸಾಲಿನ ಅಂದಾಜು ಖರ್ಚು | ರೂ. | 71,80,000.00 |
| **5.** | **2018-19ನೇ ಸಾಲಿನ ಅಂದಾಜು ಅಖೈರು ಶಿಲ್ಕು** | ರೂ. | **2,20,45,822.00** |
| 6. | 2018-19ನೇ ಸಾಲಿನಲ್ಲಿ ಅಂದಾಜು ಹೂಡಿಕೆ ಮೊಬಲಗು. | ರೂ. | 1,67,18,902.00 |
| | **ಒಟ್ಟು** | ರೂ. | **3,87,64,724.00** |

ಈ ಮೇಲಿನ ಅಂದಾಜು ಆಯವ್ಯಯ (ಬಡ್ಜೆಟ್ ಮಂಡನೆ) ಯನ್ನು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**<u>ನಿರ್ಣಯ:-</u>** ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು ಸಭೆಯಲ್ಲಿ ಮಂಡಿಸಿರುವ 2018-19ನೇ ಸಾಲಿನ ಪ್ರಾಧಿಕಾರದ ಅಂದಾಜು ಆಯವ್ಯಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಆಯವ್ಯಯಕ್ಕೆ ಸಭೆಯು ಸರ್ವಾನುಮತದ ಆಡಳಿತಾತ್ಮಕ ಅಂಗೀಕಾರ ನೀಡಿ ಸಕ್ಷಮ ಪ್ರಾಧಿಕಾರದಿಂದ ಅಂದರೆ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರುರವರಿಂದ 2018-19ನೇ ಸಾಲಿನ ಆಯವ್ಯಯಕ್ಕೆ (ಬಡ್ಜೆಟ್ ಮಂಡನೆ) ಮಂಜೂರಾತಿಯನ್ನು ಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

**<u>4)ವಿಷಯಸಂಖ್ಯೆ 4:-</u> ಶ್ರೀ ಸಿ.ಬಾಲಸುಬ್ರಮಣ್ಯ ಮತ್ತು ಶ್ರೀಮತಿ ಚೈತ್ರ ಬಿ.ಬಾಲಸುಬ್ರಮಣ್ಯ, ದೃಷ್ಟಿ ಗಣಪತಿ ದೇವಾಲಯದ ಹತ್ತಿರ, ಕನ್ನಂಡಬಾಣೆ, ಮಡಿಕೇರಿರವರು ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 137 ರಲ್ಲಿ 0.24 ಎಕರೆ 138 ರಲ್ಲಿ 0.40 ಎಕರೆ ಒಟ್ಟು 0.64 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**ಟಿಪ್ಪಣಿ:-** ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು ಹಾಗೂ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ-1 (ಅಂತಿಮ) 2021ರನ್ವಯ ವಸತಿ ಉಪಯೋಗದಲ್ಲಿ ಬರುತ್ತಿದ್ದು, ಪ್ರಸ್ತಾವಿತ ಜಾಗಕ್ಕೆ ದಕ್ಷಿಣದಲ್ಲಿ 5.00ಮೀ ಹಾಗೂ ಉತ್ತರದಲ್ಲಿ 5.20ಮೀ ಅಗಲದ ಸಾರ್ವಜನಿಕ ರಸ್ತೆಗಳಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಕಂಡುಬಂದಿರುತ್ತದೆ.

ಆದರೆ ವಲಯನಿಯಾಮಾವಳಿಗಳನ್ವಯ ವಸತಿ ಉದ್ದೇಶಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಟ 6.00ಮೀ ಇಲ್ಲದ ಕಾರಣ ಪ್ರಸ್ತಾವನೆಯನ್ನು ದಿನಾಂಕ: 08.12.2017ರ ಸಭೆಯಲ್ಲಿ ತಾಂತ್ರಿಕ ಅಭಿಪ್ರಾಯ ನೀಡುವುದು ಸೂಕ್ತವಾಗಿರುವುದಿಲ್ಲವೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿರುವಂತೆ ಅರ್ಜಿದಾರರಿಗೆ ಹಿಂಬರಹ ನೀಡಿ ಅರ್ಜಿದಾರರ ಕಡತವನ್ನು ವಿಲೆಪಡಿಸಲಾಗಿತ್ತು.

ಈ ಬಗ್ಗೆ ಸದರಿ ಭೂ ಪರಿವರ್ತನೆ ಕೋರಿರುವ ಪ್ರಸ್ತಾವನೆ ಬಗ್ಗೆ ಅರ್ಜಿದಾರರು ದಿನಾಂಕ: 20.02.2018ರಂದು ಮರು ಅರ್ಜಿ ಸಲ್ಲಿಸಿ, ಹಾಲಿ ಇರುವ 5.20ಮೀ ಅಗಲದ ರಸ್ತೆಯನ್ನು 6.00ಮೀ ಅಗಲಕ್ಕೆ ವಿಸ್ತರಿಸಲಾಗಿರುತ್ತದೆಂದು ತಿಳಿಸಿ ಪ್ರಸ್ತಾವಿತ ಜಮೀನನ್ನು ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಕೋರಿರುತ್ತಾರೆ.

ಪ್ರಸ್ತಾವನೆ ಬಗ್ಗೆ ಸ್ಥಳವನ್ನು ಮರು ಪರಿಶೀಲಿಸಿ, 6.00ಮೀ ಅಗಲದ ರಸ್ತೆ ಇರುವುದನ್ನು ಖಚಿತಪಡಿಸಿಕೊಂಡು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಾಗಕ್ಕೆ 6.00ಮೀ ಅಗಲದ ರಸ್ತೆ ಇರುವುದನ್ನು ಖಚಿತಪಡಿಸಿಕೊಂಡು ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>5) ವಿಷಯಸಂಖ್ಯೆ 5:–</u> ಶ್ರೀ ಐ.ಅಬ್ದುಲ್ ಸಲಾಂ, ಬಿನ್॥ ಇಬ್ರಾಹಿಂ, ಕಾಟಕೇರಿ ಗ್ರಾಮ, ಮಡಿಕೇರಿರವರು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂಬರ್ 215/4 ರಲ್ಲಿನ 2.07 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 0.20 ಎಕರೆ ಮನೆ ದಳಕ್ಕಾಗಿ ಹಾಗೂ ರಸ್ತೆಗೆ 0.10ಎಕರೆ ಒಟ್ಟು 0.30 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ ಪಶ್ಚಿಮದಲ್ಲಿ ಹಾಲಿ 18.00ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಿಂದ ಸಂಪರ್ಕವಿರುತ್ತದೆ. ಈ ಜಮೀನಿನ ಅಕ್ಕ ಪಕ್ಕದಲ್ಲಿ ವಸತಿ ಕಟ್ಟಡಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>6) ವಿಷಯಸಂಖ್ಯೆ 6:–</u> ಶ್ರೀ ಡಿ.ಡಿ. ಗಣೇಶ್ (ಅಧಿಕಾರ ಪತ್ರ ಪಡೆದವರು ಶ್ರೀ ಡಿ.ಡಿ. ರಮೇಶ್) ಮತ್ತು ಶ್ರೀ ಡಿ.ಡಿ. ರಮೇಶ್, 13–119(7), ಗೌಳಿಬೀದಿ, ಮಡಿಕೇರಿ ರವರು ಅರ್ಜಿ ಸಲ್ಲಿಸಿ, ಅವರ ಜಂಟಿ ಖಾತೆಯಲ್ಲಿರುವ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 56/21 ರಲ್ಲಿನ 0.21.75 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021 ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ ಪೂರ್ವದಲ್ಲಿ ಹಾಲಿ 10.00ಮೀ ಅಗಲದ ಅಬ್ಬಿಫಾಲ್ಸ್‌ಗೆ ಹೋಗುವ ರಸ್ತೆಯಿಂದ ಮತ್ತು ಪಶ್ಚಿಮದಲ್ಲಿ ಹಾಲಿ 9.00ಮೀ ಅಗಲದ ಕಾನ್ವೆಂಟ್ ಜಂಕ್ಷನ್‌ಗೆ ಹೋಗುವ ರಸ್ತೆಯಿಂದ ಸಂಪರ್ಕವಿರುತ್ತದೆ. ಈ ಜಾಗದಲ್ಲಿ ಹಾಲಿ ಹಳೆಯ ಹಂಚಿನ ಮನೆಗಳಿದ್ದು, ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಬರುತ್ತಿದೆ. ಸದರಿ ಒಟ್ಟು 0.21.75ಎಕರೆ ವಿಸ್ತೀರ್ಣದ ಜಾಗದಲ್ಲಿ 0.13ಎಕರೆ (13ಸೆಂಟ್) 'ಆ' ಕರಾಬು ಜಾಗವೆಂದು ಆರ್.ಟಿ.ಸಿ. ಯಲ್ಲಿ ನಮೂದು ಇರುತ್ತದೆ. ಈ ಜಾಗವನ್ನು ಭೂ ಪರಿವರ್ತಿಸಲು ಕಂದಾಯ ಇಲಾಖೆಯಿಂದ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದೆಂದು ಹಾಗೂ ಪೂರ್ವ ಮತ್ತು ಪಶ್ಚಿಮದಲ್ಲಿರುವ ರಸ್ತೆಯನ್ನು ಮಡಿಕೇರಿ ನಗರದ ಮಹಾಯೋಜನೆಯ ರಸ್ತೆ ಪರಿಚಲನಾ ನಕ್ಷೆಯಂತೆ 15.00ಮೀ ಅಗಲಕ್ಕೆ ವಿಸ್ತರಿಸುವ ನಿಬಂಧನೆಗೊಳಪಟ್ಟು ಸದರಿ ಪ್ರಸ್ತಾವನೆಗೆ ಈ ಕಚೇರಿಯ ತಾಂತ್ರಿಕ ಅಭಿಪ್ರಾಯ ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಅರ್ಜಿದಾರರು ಕೋರಿರುವ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 56/21 ರಲ್ಲಿನ 0.21.75 ಎಕರೆ ವಿಸ್ತೀರ್ಣದ ಜಮೀನಿನಲ್ಲಿ 0.13ಎಕರೆ (13ಸೆಂಟ್) 'ಆ' ಕರಾಬು ಜಾಗವೆಂದು ಆರ್.ಟಿ.ಸಿ. ಯಲ್ಲಿ ನಮೂದು ಇರುತ್ತದೆ. ಈ ಜಾಗವನ್ನು ಭೂ ಪರಿವರ್ತಿಸಲು ಕಂದಾಯ ಇಲಾಖೆಯಿಂದ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದೆಂದು ಹಾಗೂ ಪೂರ್ವ ಮತ್ತು ಪಶ್ಚಿಮದಲ್ಲಿರುವ ರಸ್ತೆಯನ್ನು ಮಡಿಕೇರಿ ನಗರದ ಮಹಾಯೋಜನೆಯ ರಸ್ತೆ ಪರಿಚಲನಾ ನಕ್ಷೆಯಂತೆ 15.00ಮೀ ಅಗಲಕ್ಕೆ ವಿಸ್ತರಿಸುವ ನಿಬಂಧನೆಗೊಳಪಟ್ಟು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ತಾಂತ್ರಿಕ ಅಭಿಪ್ರಾಯ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>7) ವಿಷಯಸಂಖ್ಯೆ 7:–</u> ಶ್ರೀ ಎಂ.ಹೆಚ್. ಅಫ್ರೋಸ್, ಕೋಂ॥ ಅಬ್ದುಲ್ ಕರೀಂಖಾನ್, ಖಾನ್ ಕಾಟೇಜ್, ಉಕ್ಕುಡ ರಸ್ತೆ, ಆಜಾದ್ ನಗರ, ಮಡಿಕೇರಿರವರು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 143/13 ರಲ್ಲಿನ 0.25 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ದಕ್ಷಿಣದಲ್ಲಿ 6.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುವುದರಿಂದ ಹಾಲಿ ಇರುವ 6.00ಮೀ ಅಗಲದ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಾಗಕ್ಕೆ ಹಾಲಿ ಇರುವ 6.00ಮೀ ಅಗಲದ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**8) ವಿಷಯಸಂಖ್ಯೆ 8:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 156/5 ರಲ್ಲಿರುವ 0.95 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ಉಷಾಕಿರಣ್ ಕೋಂ॥ ಶ್ರೀ ಎನ್.ಎಸ್. ಶಾಂತಿ ಸ್ವರೂಪ್ ಇವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಈ ಜಮೀನಿಗೆ ಉತ್ತರದಲ್ಲಿ ಹಾಲಿ 6.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಮತ್ತು ಪಶ್ಚಿಮದಲ್ಲಿ ಹಾಲಿ 3.50ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ.

ಸದರಿ ಜಾಗದಲ್ಲಿ ವಸತಿ ಬಡಾವಣೆಯನ್ನು ನಿರ್ಮಿಸುವುದರಿಂದ ಮಡಿಕೇರಿ ನಗರದ ಮತ್ತು ಸುತ್ತಮುತ್ತಲಿನ ಸಾರ್ವಜನಿಕರಿಗೆ ಉತ್ತಮವಾದ ನಿವೇಶನಗಳನ್ನು ಹಂಚಿಕೆ ಮಾಡುವುದು ಮತ್ತು ಬಡಾವಣೆಗಳನ್ನು ನಿರ್ಮಿಸುವುದರಿಂದ ನಗರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಂತಾಗುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 02.01.2018 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಆದರೆ ಶಕ್ತಿ ದಿನಪತ್ರಿಕೆಯಲ್ಲಿ ಪ್ರಕಟಿಸುವಾಗ ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆಂದು ತಪ್ಪಾಗಿ ಪ್ರಕಟಿಸಿರುವುದನ್ನು ತಿದ್ದುಪಡಿ ಮಾಡಿ ದಿನಾಂಕ:04.02.2018ರ ದಿನಪತ್ರಿಕೆಯಲ್ಲಿ ಇದನ್ನು ಸರಿಪಡಿಸಿ ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಬದಲಾವಣೆ ಮಾಡಲು ಕೋರಿರುವ ಬಗ್ಗೆ "ತಿದ್ದುಪಡಿ ಪ್ರಕಟಣೆ" ಯನ್ನು ಪ್ರಕಟಿಸಲಾಗಿರುತ್ತದೆ. ಈ ಸಂಬಂಧ ನಿಗಧಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಈ ಕಚೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

**ನಗರಯೋಜನಾ ಸದಸ್ಯರು/ಆಯುಕ್ತರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಉತ್ತರದಲ್ಲಿ ಹಾಲಿ 6.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಮತ್ತು ಪಶ್ಚಿಮದಲ್ಲಿ ಹಾಲಿ 3.50ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ.

ಸರ್ಕಾರದಿಂದ ಅನುಮೋದಿತ ವಲಯನಿಯಾಮಾವಳಿಗಳ ಕಂಡಿಕೆ 16.(ಭೂ ವಿಭಜನೆ ನಿಯಮಾವಳಿಗಳು)ರ ಉಪ ವಿಭಾಗ 16.3.1 ರನ್ವಯ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಕನಿಷ್ಟ ರಸ್ತೆಯ ಅಗಲವು 6.00ಮೀ ಇರಬೇಕಾಗಿದ್ದು, ಸದರಿ ಜಾಗಕ್ಕೆ 6.50ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನಿನ ಅಕ್ಕಪಕ್ಕದಲ್ಲಿ ವಸತಿ ಬೆಳವಣಿಗೆಗಳು ಇರುತ್ತವೆ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ

ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಾಧಿಕಾರದಿಂದ ಈವರೆಗೂ ಯಾವುದೇ ವಸತಿ ಯೋಜನೆಯನ್ನು ಹಮ್ಮಿಕೊಂಡು, ಬಡಾವಣೆಯನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯನ್ನು ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**9) ವಿಷಯಸಂಖ್ಯೆ 9:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂ. 174/4 ರಲ್ಲಿರುವ ಒಟ್ಟು 8.20 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 4.00 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೆ.ಬಿ.ಮಧುರಾಜ್, ನಿರ್ದೇಶಕರು, ಮೆ॥ ಬಿ.ಎನ್.ಬಿ.ಹಾಸ್ಪಿಟಾಲಿಟಿ ಸರ್ವಿಸಸ್ ಪ್ರೈ.ಲಿ, ಬೆಂಗಳೂರು ರವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಈ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಪೂರ್ವದಲ್ಲಿ ಹಾಲಿ 10.00ಮೀ ಅಗಲವಿರುವ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಮೀನು ಹಾಲಿ ಕಾಫಿ ತೋಟದಲ್ಲಿದ್ದು, ಅಕ್ಕ–ಪಕ್ಕ ವಸತಿ ಕಟ್ಟಡಗಳು ಇರುವುದು ಕಂಡುಬಂದಿರುತ್ತದೆ.

ಸದರಿ ಕೃಷಿ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸುವುದರಿಂದ ವಾಣಿಜ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಸಿಗುವುದು, ವಿದ್ಯಾವಂತ ಹಾಗೂ ಗ್ರಾಮೀಣ ಯುವಕ ಯುವತಿಯರಿಗೆ ಸ್ಥಳೀಯವಾಗಿ ಉದ್ಯೋಗದ ಅವಕಾಶ ಒದಗಿಸುವುದು. ಸ್ಥಳೀಯವಾಗಿ ಬೆಳೆದ ಪದಾರ್ಥಗಳಿಗೆ ಬೇಡಿಕೆ ಹಾಗೂ ಮಾರುಕಟ್ಟೆ ಸಿಗುವುದು, ಕಟ್ಟಡ ನಿರ್ಮಾಣ ವಸ್ತುಗಳು ಹಾಗೂ ಕಾರ್ಮಿಕರಿಗೆ ಪ್ರೋತ್ಸಾಹ ಸಿಗುವುದು ಮತ್ತು ಪ್ರವಾಸಿಗರಿಗೆ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ವಸತಿ ಮತ್ತು ಆಹಾರ ಒದಗಿಸುವ ಅಂಶಗಳನ್ನೊಳಗೊಂಡ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ:21.01.2018ರಂದು ಪ್ರಜಾಸತ್ಯ ಮತ್ತು ದಿನಾಂಕ:22.01.2018 ರಂದು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಈ ಸಂಬಂಧ ನಿಗಧಿತ ಕಾಲಾವಧಿಯ ಒಳಗೆ ಶ್ರೀ ಎಂ.ಎ.ರಾಮಪ್ಪ, ಅಧ್ಯಕ್ಷರು, ಮಾರ್ಗದರ್ಶಿ ಸೇವಾ ಸಂಸ್ಥೆ, ಸ್ಕೌಟ್ಸ್ ಅಂಡ್ ಗೈಡ್ಸ್ ಭವನ, ಮ್ಯಾನ್ಸ್ ಕಾಂಪೌಂಡ್ ಸಮೀಪ, ಮಡಿಕೇರಿ ರವರಿಂದ 1 ಆಕ್ಷೇಪಣಾ ಅರ್ಜಿಯನ್ನು ಸ್ವೀಕರಿಸಲಾಗಿರುತ್ತದೆ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 10.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನಿಗೆ 10.00 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbaration) ದೂರವಿದ್ದು, ಜಮೀನಿನ ಸಮೀಪದಲ್ಲಿ ಯಾವುದೇ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ನಿಗಧಿತ ಅವಧಿಯಲ್ಲಿ ಮಾರ್ಗದರ್ಶಿ ಸೇವಾ ಸಂಸ್ಥೆ ಮಡಿಕೇರಿರವರಿಂದ ಸ್ವೀಕರಿಸಿರುವ ಆಕ್ಷೇಪಣಾ ಅರ್ಜಿಯನ್ನು ಸಭೆಯಲ್ಲಿ ಓದಲಾಯಿತು ಹಾಗೂ ಸಭೆಯಲ್ಲಿ ವಾಣಿಜ್ಯೋಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಪ್ರವಾಸಿ ಕೇಂದ್ರವಾದ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಇತರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಪ್ರವಾಸೋದ್ಯಮವನ್ನು ಬೆಳೆಸುವ ಹಿತದೃಷ್ಟಿಯಿಂದ ಅರ್ಜಿದಾರರು ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯನ್ನು ತಿರಸ್ಕರಿಸಿ ಪ್ರಸ್ತಾವನೆಯನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**10) ವಿಷಯಸಂಖ್ಯೆ 10:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂ.39 ರಲ್ಲಿನ 0.55 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೆ.ಆರ್.ರಿಜ್ವಾನ್ ಶರೀಫ್, ಬಿನ್॥ ಕೆ.ಯು. ರಜ್ಹಾಕ್, ತ್ಯಾಗರಾಜ ಕಾಲೋನಿ, ಮಡಿಕೇರಿ ರವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ ದಕ್ಷಿಣದಲ್ಲಿ ಹಾಲಿ 18.00ಮೀ ಅಗಲವಿರುವ ಮಂಗಳೂರಿನಿಂದ ಮಡಿಕೇರಿ ಮೈಸೂರು ಮೂಲಕ ಬೆಂಗಳೂರಿಗೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275 ರಿಂದ ರಸ್ತೆ ಸಂಪರ್ಕ ಇರುತ್ತದೆ. ಈ ಜಮೀನು ಹಾಲಿ ಕಾಫಿ ತೋಟದಲ್ಲಿದ್ದು, ಅಕ್ಕ–ಪಕ್ಕದಲ್ಲಿ ಕೆಲವು ಅಂಗಡಿ ಮಳಿಗೆಗಳು ಮತ್ತು ವಸತಿ ಕಟ್ಟಡಗಳು ಇರುವುದು ಕಂಡುಬಂದಿರುತ್ತದೆ.

ಸದರಿ ಕೃಷಿ ವಲಯದ ಜಮೀನಿನಲ್ಲಿ ವಾಣಿಜ್ಯ ಉದ್ದೇಶದ ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸುವ ಯೋಜನೆಯಿಂದಾಗಿ ಮುಖ್ಯ ಪ್ರವಾಸಿ ತಾಣವಾಗಿರುವ ಮಡಿಕೇರಿಗೆ ಆಗಮಿಸುವ ಪ್ರವಾಸಿಗರಿಗೆ ಊಟೋಪಚಾರದ ಸೌಲಭ್ಯವನ್ನು ಒದಗಿಸುವ ಹಾಗೂ ಇಲ್ಲಿನ ನಿವಾಸಿಗಳಿಗೆ ಉದ್ಯೋಗವನ್ನು ನೀಡುವ ಸಾರ್ವಜನಿಕ ಹಿತದೃಷ್ಟಿಯನ್ನು ಹೊಂದಿರುವುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಪತ್ರ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ

ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 21.01.2018 ರಂದು ಪ್ರಜಾಸತ್ಯ ಮತ್ತು ದಿನಾಂಕ:22.01.2018 ರಂದು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಈ ಸಂಬಂಧ ನಿಗಧಿತ ಕಾಲಾವಧಿಯ ಒಳಗೆ ಶ್ರೀ ಎಂ.ಎ.ರಾಮಪ್ಪ, ಅಧ್ಯಕ್ಷರು, ಮಾರ್ಗದರ್ಶಿ ಸೇವಾ ಸಂಸ್ಥೆ, ಸ್ಕೌಟ್ಸ್ ಅಂಡ್ ಗೈಡ್ಸ್ ಭವನ, ಮ್ಯಾನ್ಸ್ ಕಾಂಪೌಂಡ್ ಸಮೀಪ, ಮಡಿಕೇರಿರವರಿಂದ 1 ಆಕ್ಷೇಪಣಾ ಅರ್ಜಿಯನ್ನು ಸ್ವೀಕರಿಸಲಾಗಿರುತ್ತದೆ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿರುತ್ತದೆ. ಸದರಿ ಜಾಗಕ್ಕೆ ದಕ್ಷಿಣದಲ್ಲಿ ಹಾಲಿ 18.00ಮೀ ಅಗಲದ ರಾಷ್ಟ್ರೀಯ ಹೆದ್ದಾರಿಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನಗ್ರಾಯೋನಿ/ ಜಂನಿ/ಕೊಡಗು/ಗುಪ್ರಘೋ/01/2013–14, ದಿನಾಂಕ:16.01.2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಟ 12.00ಮೀ ಇರಬೇಕಾಗಿರುತ್ತದೆ. ಸದರಿ ಜಮೀನಿಗೆ 18.00ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಾಗದ ಅಕ್ಕ–ಪಕ್ಕದಲ್ಲಿ ಕೆಲವು ಅಂಗಡಿ ಮಳಿಗೆಗಳು ಮತ್ತು ವಸತಿ ಕಟ್ಟಡಗಳು ಇರುತ್ತದೆ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ನಿಗಧಿತ ಅವಧಿಯಲ್ಲಿ ಮಾರ್ಗದರ್ಶಿ ಸೇವಾ ಸಂಸ್ಥೆ ಮಡಿಕೇರಿರವರಿಂದ ಸ್ವೀಕರಿಸಿರುವ ಆಕ್ಷೇಪಣಾ ಅರ್ಜಿಯನ್ನು ಸಭೆಯಲ್ಲಿ ಓದಲಾಯಿತು ಹಾಗೂ ಸಭೆಯಲ್ಲಿ ವಾಣಿಜ್ಯೋಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಪ್ರವಾಸಿ ಕೇಂದ್ರವಾದ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಇತರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಪ್ರವಾಸೋದ್ಯಮವನ್ನು ಬೆಳೆಸುವ ಹಿತದೃಷ್ಟಿಯಿಂದ ಅರ್ಜಿದಾರರು ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯನ್ನು ತಿರಸ್ಕರಿಸಿ, ಪ್ರಸ್ತಾವಿತ ಜಮೀನಿಗೆ 18.00ಮೀ ಅಗಲದ ರಸ್ತೆ ಸಂಪರ್ಕವಿದ್ದು, ಜಾಗದ ಅಕ್ಕಪಕ್ಕದಲ್ಲಿ ಬೆಳವಣಿಗೆಗಳು ಬಂದಿರುವುದನ್ನು ಪರಿಗಣಿಸಿ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**<u>11) ವಿಷಯಸಂಖ್ಯೆ 11:–</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 50/5 ರಲ್ಲಿನ 1.53 ಎಕರೆ ಮತ್ತು 83/3 ರಲ್ಲಿನ 1.05 ಎಕರೆ ಒಟ್ಟು 2.58 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ವಸತಿ ಸಮುಚ್ಛಯ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಪೌಲ್ ಪಿ.ಜಾನ್ ಮತ್ತು ಮೊಹಮ್ಮದ್ ಆಲಿ.ಎನ್, ನಿರ್ದೇಶಕರುಗಳು, ಪೌಲ್ ರೆಸಾರ್ಟ್ ಅಂಡ್ ಹೊಟೇಲ್ ಪ್ರೈ.ಲಿ, ಮೇಕೇರಿ ಗ್ರಾಮ, ಮಡಿಕೇರಿ ತಾಲ್ಲೂಕು, ಮಡಿಕೇರಿ ರವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಈ ಜಾಗಕ್ಕೆ ಪಶ್ಚಿಮದಲ್ಲಿ ಹಾಲಿ 12.00ಮೀ ಅಗಲವಿರುವ

ಮಡಿಕೇರಿಯಿಂದ ವಿರಾಜಪೇಟೆಗೆ ಹಾದು ಹೋಗುವ ರಾಜ್ಯ ಹೆದ್ದಾರಿಯಿಂದ ಸಂಪರ್ಕವಿರುತ್ತದೆ. ಈ ಜಮೀನು ಹಾಲಿ ಕಾಫಿ ತೋಟದಲ್ಲಿದ್ದು, ಅಕ್ಕ-ಪಕ್ಕದಲ್ಲಿ ವಸತಿ ಕಟ್ಟಡಗಳು ಮತ್ತು ಒಂದು ರೆಸಾರ್ಟ್ ಇರುವುದು ಕಂಡುಬಂದಿರುತ್ತದೆ.

ಸದರಿ ಕೃಷಿ ವಲಯದ ಜಮೀನಿನಲ್ಲಿ ವಾಣಿಜ್ಯ ಉದ್ದೇಶದ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ವಸತಿ ಸಮುಚ್ಚಯ ನಿರ್ಮಿಸುವ ಯೋಜನೆಯಿಂದಾಗಿ ಮಡಿಕೇರಿ ನಗರದ ಸ್ಥಳೀಯ ಉದ್ಯೋಗಸ್ಥರಿಗೆ ವಸತಿ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಹಾಗೂ ಪ್ರವಾಸಿಗರಿಗೆ ತಂಗುವ ವ್ಯವಸ್ಥೆಯ ಉದ್ದೇಶವನ್ನು ಇಟ್ಟುಕೊಂಡು ಮತ್ತು ಈಗಾಗಲೇ ಅನುಮೋದನೆ ಪಡೆದಿರುವ ಪ್ರಸ್ತಾವಿತ ಜಮೀನಿಗೆ ಒತ್ತಿಕೊಂಡಿರುವ ರೆಸಾರ್ಟ್‌ಗೆ ಬರುವ ಪ್ರತಿಯೊಬ್ಬರಿಗೂ ಒಂದೇ ಸೂರಿನಡಿ ಎಲ್ಲಾ ವ್ಯವಸ್ಥೆಯನ್ನು ಒದಗಿಸುವ ಸಾರ್ವಜನಿಕ ಹಿತದೃಷ್ಟಿಯನ್ನು ಹೊಂದಿರುವುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಪತ್ರ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ವಸತಿ ಸಮುಚ್ಚಯ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 24.01.2018 ರಂದು ಪ್ರಜಾಸತ್ಯ ಮತ್ತು ದಿನಾಂಕ:22.01.2018 ರಂದು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಈ ಸಂಬಂಧ ನಿಗಧಿತ ಕಾಲಾವಧಿಯ ಒಳಗೆ ಶ್ರೀ ಎಂ.ಎ.ರಾಮಪ್ಪ, ಅಧ್ಯಕ್ಷರು, ಮಾರ್ಗದರ್ಶಿ ಸೇವಾ ಸಂಸ್ಥೆ, ಸ್ಕೌಟ್ಸ್ ಅಂಡ್ ಗೈಡ್ಸ್ ಭವನ, ಮ್ಯಾನ್ಸ್ ಕಾಂಪೌಂಡ್ ಸಮೀಪ, ಮಡಿಕೇರಿ ರವರಿಂದ 1 ಆಕ್ಷೇಪಣಾ ಅರ್ಜಿಯನ್ನು ಸ್ವೀಕರಿಸಲಾಗಿರುತ್ತದೆ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿರುತ್ತದೆ. ಸದರಿ ಜಮೀನಿಗೆ ಹಾಲಿ 12.00ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನಗ್ರಾಯೋನಿ/ಜಂನಿ/ಕೊಡಗು/ ಗುಪ್ರಘೋ/01/2013-14, ದಿನಾಂಕ:16.01.2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಟ 12.00ಮೀ ಇರಬೇಕಾಗಿದ್ದು, ಸದರಿ ಜಮೀನಿಗೆ 12.00ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನಿನ ಅಕ್ಕ – ಪಕ್ಕದಲ್ಲಿ ವಸತಿ ಕಟ್ಟಡಗಳು ಮತ್ತು ಒಂದು ವಾಣಿಜ್ಯ ಕಟ್ಟಡ (ರೆಸಾರ್ಟ್) ಇರುತ್ತದೆ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:-** ಪ್ರಸ್ತಾವನೆ ಬಗ್ಗೆ ನಿಗಧಿತ ಅವಧಿಯಲ್ಲಿ ಮಾರ್ಗದರ್ಶಿ ಸೇವಾ ಸಂಸ್ಥೆ ಮಡಿಕೇರಿರವರಿಂದ ಸ್ವೀಕರಿಸಿರುವ ಆಕ್ಷೇಪಣಾ ಅರ್ಜಿಯನ್ನು ಸಭೆಯಲ್ಲಿ ಓದಲಾಯಿತು ಹಾಗೂ ಸಭೆಯಲ್ಲಿ ವಾಣಿಜ್ಯೋಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಪ್ರವಾಸಿ ಕೇಂದ್ರವಾದ ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಇತರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಪ್ರವಾಸೋದ್ಯಮವನ್ನು ಬೆಳೆಸುವ ಹಿತದೃಷ್ಟಿಯಿಂದ ಅರ್ಜಿದಾರರು ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯನ್ನು ತಿರಸ್ಕರಿಸಿ, ಪ್ರಸ್ತಾವಿತ ಜಮೀನಿಗೆ 12.00ಮೀ ಅಗಲದ ರಸ್ತೆ ಸಂಪರ್ಕವಿದ್ದು, ಜಾಗದ ಅಕ್ಕಪಕ್ಕದಲ್ಲಿ ಬೆಳವಣಿಗೆಗಳು ಬಂದಿರುವುದನ್ನು ಪರಿಗಣಿಸಿ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ವಸತಿ ಸಮುಚ್ಚಯ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಬಹುದೆಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

**12) ವಿಷಯಸಂಖ್ಯೆ 12:– ಶ್ರೀ ಆರ್.ನಾಗೇಂದ್ರ ನಾಯಕ್, ವಕೀಲರು, ಶೇಷಾದ್ರಿ ಪುರಂ, ಬೆಂಗಳೂರು ರವರು ಮಾನ್ಯ ಉಚ್ಛ ನ್ಯಾಯಾಲಯ, ಕರ್ನಾಟಕ ಸರ್ಕಾರ, ಬೆಂಗಳೂರಿನಲ್ಲಿ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿರುವ ಬಾಪ್ತು ಶುಲ್ಕ ಪಾವತಿಸಲು ಕೋರಿರುವ ಬಗ್ಗೆ.**

**ಟಿಪ್ಪಣಿ:–** ಶ್ರೀ ಆರ್.ನಾಗೇಂದ್ರ ನಾಯಕ್, ವಕೀಲರು, ಬೆಂಗಳೂರುರವರು ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿರುವ ಬಾಬ್ತು ಈ ಕೆಳಕಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಶುಲ್ಕ ಪಾವತಿಸಲು ಕೋರಿರುವುದನ್ನು ಪಾವತಿಸಲು ಪ್ರಾಧಿಕಾರದ ಅನುಮೋದನೆಗಾಗಿ ಮಂಡಿಸಲಾಗಿದೆ.

| ಕ್ರ.ಸಂ. | ಪ್ರಕರಣಗಳ ವಿವರ | ರಿಟ್ ಪಿಟೀಷನ್ ಸಂಖ್ಯೆ | ವಕೀಲರು ಕೋರಿರುವ ಶುಲ್ಕದ ವಿವರ |
|---|---|---|---|
| 1 | ಶ್ರೀ ನಜೀರ್ ಅಹಮ್ಮದ್ ಎಫ್.ಹೆಚ್. ವಿರುದ್ಧ ಆಯುಕ್ತರು | 45570/2015 | 20,000/– |
| 2 | ಶ್ರೀ ಸಿ.ಸಿ. ಗಣಪತಿ ವಿರುದ್ಧ ಆಯುಕ್ತರು (ಪಿ.ಜಿ. ಸೋಮಣ್ಣ) | 55414/2015 | 20,000/– |
| 3 | ಶ್ರೀ ಪದ್ಮಜ.ವಿ. ಸತೀಶ್ ವಿರುದ್ದ ಆಯುಕ್ತರು | 59344/2015 | 20,000/– |
| 4 | ಶ್ರೀ ಪಿ.ಡಿ. ಪೊನ್ನಪ್ಪ ವಿರುದ್ಧ ಹೆಚ್.ಎಂ. ನಂದಕುಮಾರ್/ ಆಯುಕ್ತರು. | 7619/2016 | 20,000/– |
| 5 | ಮೆ॥ ಮರ್ಕರ ಡೌನ್ಸ್ ಗಾಲ್ಫ್ ಕ್ಲಬ್ ವಿರುದ್ಧ ಆಯುಕ್ತರು | 267/2017 | 20,000/– |
| 6 | ಶ್ರೀ ಡಿ.ಹೆಚ್. ಮೊಯಿದು ವಿರುದ್ಧ ಆಯುಕ್ತರು | 27021/2017 | 25,000/– |
| 7 | ಶ್ರೀ ಡಿ.ಹೆಚ್. ಮೊಯಿದು ವಿರುದ್ಧ ಆಯುಕ್ತರು | ರಿವಿವ್ಯೂ ಪಿಟಿಷನ್ 384/2017 & 385–390 /2017 | 25,000/– |
| | | **ಒಟ್ಟು** | **1,50,000/–** |

**ನಿರ್ಣಯ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿರುವ ವಕೀಲರಾದ ಶ್ರೀ ನಾಗೇಂದ್ರ ನಾಯಕ್‌ರವರು ವಕಾಲತ್ತು ವಹಿಸಿರುವ ಬಾಬ್ತು ಕೋರಿರುವ ಶುಲ್ಕವು ನ್ಯಾಯಯುತವಾಗಿ ಕನಿಷ್ಟ ದರವಾಗಿರುವುದರಿಂದ ಪಾವತಿಸುವುದು ಸಮಂಜಸವಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಒಪ್ಪಿ ಈ ಮೇಲಿನಂತೆ ಒಟ್ಟು ಶುಲ್ಕ ರೂ. 1,50,000/– ಮಾತ್ರವನ್ನು ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಲು ಆಯುಕ್ತರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**13)ವಿಷಯಸಂಖ್ಯೆ 13:– ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸೆಕೆಂಡ್ ಡಿವಿಜನ್ ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಕೆ.ಕೆ. ಜಯಂತಿರವರು ಪ್ರಾಧಿಕಾರದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಕೋರಿರುವುದನ್ನು ಸಭಾ ಮಂಜೂರಾತಿಗಾಗಿ ಮಂಡಿಸಿದೆ.**

**ನಿರ್ಣಯ:–** ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಈ ಪ್ರಾಧಿಕಾರದಲ್ಲಿ ಯಾವುದೇ ಸಿಬ್ಬಂದಿಯವರು ಇಲ್ಲದ ಕಾರಣ ಪ್ರಾಧಿಕಾರದ ದೈನಂದಿನ ಕಚೇರಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಕಷ್ಟ ಸಾಧ್ಯವಾಗಿರುವುದರಿಂದ ಸದರಿಯವರು ಸ್ವಯಂ ನಿವೃತ್ತಿ ಹೊಂದಲು ಕೋರಿರುವ ಪ್ರಸ್ತಾವನೆಯನ್ನು ಸಭೆಯಲ್ಲಿ ತಿರಸ್ಕರಿಸಲಾಗಿದೆ. ಅನಿವಾರ್ಯ ಸಂಧರ್ಭ ಬಂದಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಆಯುಕ್ತರಿಗೆ ಅಧಿಕಾರ ನೀಡಲಾಗಿದೆ.

**14)ವಿಷಯಸಂಖ್ಯೆ 14:– ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು:–**

**1. ವಿಷಯಸಂಖ್ಯೆ 1:– ಮಡಿಕೇರಿ ನಗರಸಭಾ ಕಚೇರಿ ಮುಂಭಾಗದಲ್ಲಿ ಬರುವ ದಿ॥ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನದವರೆಗೆ ಅಂಕಾರಿಕಾ ವಿದ್ಯುತ್ ಕಂಬಗಳು ಮತ್ತು ಬಲ್ಬ್‌ಗಳನ್ನು ಅಳವಡಿಸುವ ಬಗ್ಗೆ.**

**ನಿರ್ಣಯ:–**ಪ್ರಸ್ತಾವನೆ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಸರ್ಕಾರದ ಆದೇಶದಂತೆ E-Procurement ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ಮಿತಿ ಕೇಂದ್ರ/ನಗರಸಭೆಗೆ ವಹಿಸಲು ತೀರ್ಮಾನಿಸಿರುವಂತೆ ಯೋಜನಾ ನಿರ್ದೇಶಕರು, ಕೊಡಗು ನಿರ್ಮಿತಿ ಕೇಂದ್ರ ಮಡಿಕೇರಿರವರನ್ನು ಕೋರಲಾಗಿ ಅವರ ಪತ್ರ ಸಂಖ್ಯೆ:ಕೊ.ನಿ.ಕೇಂ.ಮ/ಇತರೆ/2017–18/240, ದಿನಾಂಕ: 27.12.2017ರ ಪತ್ರದಲ್ಲಿ 2017–18ನೇ ಸಾಲಿಗೆ ಸರ್ಕಾರದ ಅಧಿಸೂಚನೆಯಲ್ಲಿ ನಿರ್ಮಿತಿ ಕೇಂದ್ರಗಳಿಗೆ 4(ಜಿ) ವಿನಾಯಿತಿ ನೀಡಿದ್ದು, ಸದರಿ ವಿನಾಯಿತಿಯಂತೆ ಇಂತಹ ಕಾಮಗಾರಿಗಳನ್ನು 4(ಜಿ) ವಿನಾಯಿತಿ ಅಡಿ ನಿರ್ವಹಿಸುವುದನ್ನು ನಿರ್ಭಂಧಿಸಲಾಗಿರುತ್ತದೆ. ಆದ್ದರಿಂದ ಈ ಕಾಮಗಾರಿಗಳನ್ನು ನಿರ್ವಹಿಸಲಾಗುವುದಿಲ್ಲವೆಂದು ಪತ್ರ ಸಲ್ಲಿಸಿರುವ ಮೇರೆಗೆ ಪೌರಾಯುಕ್ತರು, ನಗರಸಭೆ, ಮಡಿಕೇರಿ ರವರನ್ನು ಸದರಿ ಕಾಮಗಾರಿಗಳನ್ನು E-Procurement ಟೆಂಡರ್ ಕರೆದು ನಿರ್ವಹಿಸುವ ಬಗ್ಗೆ ದಿನಾಂಕ: 01–01–2018 ರಂದು ಪತ್ರದ ಮೂಲಕ ಕೋರಲಾಗಿ ಪ್ರಸ್ತಾವನೆಗೆ ಮಾನ್ಯ ಜಿಲ್ಲಾಧಿಕಾರಿಯವರು ಅನುಮೋದನೆ ನೀಡಿರುವುದಾಗಿ ತಿಳಿಸಿರುತ್ತಾರೆ ಹಾಗೂ ಪೌರಾಯುಕ್ತರು, ನಗರಸಭೆ ಮಡಿಕೇರಿರವರು ಈ ಬಗ್ಗೆ ಕ್ರಮ ವಹಿಸಲು ಅನುಮೋದನೆಯನ್ನು ಕೋರಿದಂತೆ ಸದರಿಯವರಿಂದಲೇ ಈ ಮೇಲಿನ ಕಾಮಗಾರಿಯನ್ನು ನಿರ್ವಹಿಸಲು ನಗರಸಭೆ ಕಚೇರಿ ಒಪ್ಪಿಗೆ ನೀಡಿರುತ್ತಾರೆ. ಅದರಂತೆ ನಗರಸಭೆಯಿಂದ ಪ್ರಾಧಿಕಾರದ ಅನುದಾನದಡಿ ಕೈಗೊಳ್ಳಬೇಕಾಗಿರುವ ಮಡಿಕೇರಿ ನಗರಸಭೆಯ ಕಚೇರಿ ಹತ್ತಿರದ ದಿ॥ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟು ಉದ್ಯಾನದವರೆಗೆ ಅಲಂಕಾರಿಕಾ ವಿದ್ಯುತ್ ಕಂಬಗಳು ಮತ್ತು ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯ ಬಗ್ಗೆ ಅಲ್ಪಾವದಿ E-Procurement Portal ಮೂಲಕ ದಿನಾಂಕ:01.03.2018ರಂದು ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಎಂದು ಸಭೆಯಲ್ಲಿ ಮಾಹಿತಿಗಳನ್ನು ಮಾನ್ಯ ಅಧ್ಯಕ್ಷರು ವಿವರಿಸಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿಯಮಾನುಸಾರ ಕನಿಷ್ಟ ದರಪಟ್ಟಿಯ ಟೆಂಡರ್‌ದಾರರೊಂದಿಗೆ Financial Tender Agreement (ಒಪ್ಪಂದ ಪತ್ರ) ಮಾಡಿಕೊಂಡ ನಂತರದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ನಗರಸಭೆಯಿಂದ ಕಾರ್ಯಾದೇಶವನ್ನು ನೀಡುವಂತೆ ಹಾಗೂ ಈ ಕಾಮಗಾರಿಗಳ ಖರ್ಚು ವೆಚ್ಚಗಳಿಗಾಗಿ ನಿಗಧಿ ಪಡಿಸಲಾಗಿರುವ ಮೊಬಲಗು ರೂ.20.00ಲಕ್ಷ ಹಣವನ್ನು ಚೆಕ್ ಮುಖಾಂತರ ಆಯುಕ್ತರು, ನಗರಸಭೆ, ಮಡಿಕೇರಿರವರ ಹೆಸರಿಗೆ ಹಸ್ತಾಂತರಿಸಿ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳ ಗುಣಮಟ್ಟವನ್ನು 3ನೇ ಪಾರ್ಟಿಯ ಪರಿಶೀಲನೆಗೆ ಒಳಪಡಿಸಿ, ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳಿಗನುಗುಣವಾಗಿ ಹಣ ಬಿಡುಗಡೆಗೊಳಿಸುವಂತೆಯೂ ಹಾಗೂ ಸದರಿ ಜಾಗದಲ್ಲಿ ಕಾಮಗಾರಿ ಪೂರ್ಣಗೊಂಡ ನಂತರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ನಾಮಫಲಕವನ್ನು ಅಳವಡಿಸುವುದು ಮತ್ತು ವಿನಿಯೋಗ ಪ್ರಮಾಣ ಪತ್ರ (Utilization certificate) ಪಡೆಯುವುದನ್ನು ಕಡ್ಡಾಯಗೊಳಿಸಿ ಸಭೆಯು ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಪೌರಾಯುಕ್ತರು, ನಗರಸಭೆ, ಮಡಿಕೇರಿರವರಿಗೆ ಸೂಚಿಸುತ್ತಾ, ಸರ್ವಾನುಮತದ ಅಂಗೀಕಾರ ನೀಡಿತು.

**2. ವಿಷಯಸಂಖ್ಯೆ 2:–** ಶ್ರೀ ಎಂ.ಎಸ್.ಜಲೇಂದ್ರ, ಶ್ರೀ ಎಂ.ಎಸ್.ಪ್ರಸನ್ನ ಮತ್ತು ಶ್ರೀ ಎಂ.ಎಸ್.ಪ್ರತಾಪ್, C/o ನಂಬರ್ ಬಿ1, 112/3, ಗೋಕುಲ ಅಪಾರ್ಟ್‌ಮೆಂಟ್, ಬೆಂಗಳೂರು ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 193 ರಲ್ಲಿನ 4.95 ಎಕರೆ, 195/2 ರಲ್ಲಿನ 2.53 ಎಕರೆ, 196/2 ರಲ್ಲಿನ 20.00 ಎಕರೆ, 224/1 ರಲ್ಲಿನ 0.26 ಎಕರೆ ಮತ್ತು 284 ರಲ್ಲಿನ 1.16 ಎಕರೆ ಒಟ್ಟು 28.90 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ನಿರ್ಣಯ:–** ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಈ ಬಗ್ಗೆ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: ಡಿ.ಟಿ.ಸಿ.ಪಿ–2–ಎಂ.ವೈ.ಎಸ್/ ಎಂ.ಡಿ.ಕೆ/ಸಿ.ಎಲ್.ಯು–2017–18, ದಿನಾಂಕ: 15.02.2018ರ ಪತ್ರದಲ್ಲಿ ಪ್ರಸ್ತಾವನೆ ಬಗ್ಗೆ ದಿನಾಂಕ:25.07.2017 ರಂದು ನೀಡಲಾಗಿರುವ ಪತ್ರಿಕಾ ಪ್ರಕಟಣೆಗೆ ಸ್ವೀಕೃತಗೊಂಡಿರುವ ಆಕ್ಷೇಪಣೆಯನ್ನು ತಿರಸ್ಕರಿಸುವ ಅಥವಾ ಪುರಸ್ಕರಿಸುವ ಬಗ್ಗೆ ಸಭೆಯಲ್ಲಿ ನಿರ್ಣಯ ಕೈಗೊಂಡಿರುವುದಿಲ್ಲವಾದ್ದರಿಂದ ಆಕ್ಷೇಪಣೆಯನ್ನು ತಿಳಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ಸೂಕ್ತ ನಿರ್ಣಯ ಕೈಗೊಂಡು ವರದಿ ಸಲ್ಲಿಸಲು ಸೂಚಿಸಿರುವ ಅಂಶವನ್ನು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ಓದಿ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ದಿನಾಂಕ: 08.12.2017ರ ವಿಷಯ ಸಂಖ್ಯೆ: 14ರಲ್ಲಿ ತೀರ್ಮಾನಿಸಿರುವಂತೆ ಪ್ರಸ್ತಾವಿತ ಜಮೀನು ಎಕೋ ಸೆನ್ಸಿಟಿವ್ ಝೋನ್ Eco Sensitive Zone ನಲ್ಲಿ ಬರುತ್ತಿಲ್ಲವಾದ ಕಾರಣ ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯನ್ನು ತಿರಸ್ಕರಿಸಬಹುದಾಗಿರುತ್ತದೆ ಎಂದು ಸಭೆಯು ಬಹುಮತದ ಅಂಗೀಕಾರ ನೀಡಿತು.

<u>3 ವಿಷಯ ಸಂಖ್ಯೆ 3</u>**:– ಶ್ರೀಮತಿ ಕೆ.ಟಿ.ರಾಣಿ, ಕರ್ಣಂಗೇರಿ ಗ್ರಾಮ, ಮಡಿಕೇರಿರವರು ಅರ್ಜಿ ಸಲ್ಲಿಸಿ ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/30ರಲ್ಲಿನ 0.73 ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ತಾಂತ್ರಿಕ ಅಭಿಪ್ರಾಯವನ್ನು ಕೋರಿರುವ ಬಗ್ಗೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1(ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಮಡಿಕೇರಿಯಿಂದ ಸೋಮವಾರಪೇಟೆಗೆ ಹಾದು ಹೋಗುವ ರಾಜ್ಯ ಹೆದ್ದಾರಿ 15.20ಮೀ ಅಗಲದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಪ್ರಸ್ತಾವಿತ ಜಾಗಕ್ಕೆ ಭೂ ಪರಿವರ್ತಿಸಲು ಈ ಕಚೇರಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾದರೂ ಸಹ ಶ್ರೀ ಕೆ.ಎಂ.ಕಾರ್ಯಪ್ಪ, ಮಡಿಕೇರಿರವರು ದಿನಾಂಕ:14.09.2015ರಂದು ಅರ್ಜಿ ಸಲ್ಲಿಸಿ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/1ರಲ್ಲಿ ಬರುವ ಒಟ್ಟು 39.94ಎಕರೆ ವಿಸ್ತೀರ್ಣದ ಜಮೀನಿನ ಬಗ್ಗೆ ಸೀನಿಯರ್ ಸಿವಿಲ್ ನ್ಯಾಯಾಲಯ, ಮಡಿಕೇರಿಯಲ್ಲಿ ಓ.ಎಸ್.ನಂಬರ್ 77/2013ರಲ್ಲಿ ದಾವೆ ಇದ್ದು ಸ್ಟೇ ಆಗಿರುವುದರಿಂದ ನ್ಯಾಯಾಲಯದಲ್ಲಿ ಕೇಸ್ ಇತ್ಯರ್ಥವಾಗುವವರೆಗೆ ಸದರಿ ಸರ್ವೆ ನಂಬರಿನಲ್ಲಿ ಬರುವ ಯಾವುದೇ ಜಾಗಕ್ಕೆ ಭೂ ಪರಿವರ್ತನೆ/ಭೂ ವಿನ್ಯಾಸ/ಕಟ್ಟಡ ನಿರ್ಮಿಸಲು ಅನುಮೋದನೆ ನೀಡಬಾರದಾಗಿ ಕೋರಿರುತ್ತಾರೆ. ಈ ವಿಷಯದ ಬಗ್ಗೆ ದಿನಾಂಕ:21.09.2015ರಂದು ನಡೆದ ಪ್ರಾಧಿಕಾರದ ಸಭಾ ವಿಷಯಸಂಖ್ಯೆ 7ರಲ್ಲಿ ಸದರಿ ಸರ್ವೆ ನಂಬರಿನಲ್ಲಿ ಬರುವ ಜಾಗವನ್ನು ಅಭಿವೃದ್ಧಿ ಪಡಿಸುವ ಮೊದಲು ಅರ್ಜಿದಾರರು ನೀಡಿರುವ ಸ್ಟೇ ಆರ್ಡರ್ ಹಾಗೂ ಇನ್ನಿತರ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಲು ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿದ್ದರೂ ಸಹ ದಿನಾಂಕ:08.03.2016ರ ವಿಷಯಸಂಖ್ಯೆ 1 ರಲ್ಲಿ ಮತ್ತೆ ಪ್ರಸ್ತಾಪಿಸಿ ಸದರಿ ಸರ್ವೆ ನಂಬರಿನಲ್ಲಿ ಮುಂದೆ ಇಂತಹ ಪ್ರಕರಣಗಳು ಬಂದಲ್ಲಿ ಪ್ರಾಧಿಕಾರದ ವಕೀಲರಿಂದ

ಕಾನೂನು ಸಲಹೆ ಪಡೆದುಕೊಂಡು ನಂತರದಲ್ಲಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳುವುದು ಸೂಕ್ತವೆಂದು ತೀರ್ಮಾನಿಸಲಾಯಿತು. ಅದರಂತೆ ಸದರಿ ಪ್ರಸ್ತಾವನೆಗೆ ಈ ಪ್ರಾಧಿಕಾರದ ವಕೀಲರಾದ ಶ್ರೀ ಬಿ.ಎಸ್.ರುದ್ರಪ್ರಸನ್ನರವರ ಕಾನೂನು ಸಲಹೆಯನ್ನು ಕೋರಲಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂ.99/1ರ 39.94ಎಕರೆ ಜಮೀನಿನ ಯಥಾ ಸ್ಥಿತಿಯನ್ನು ಕಾಪಾಡಬೇಕೆಂಬ ನ್ಯಾಯಾಲಯದ ಆದೇಶವಿದ್ದು, ಭೂ ಪರಿವರ್ತಿಸಲು ಕಾನೂನಿನನ್ವಯ ಯಾವುದೇ ಅಡೆ ತಡೆಗಳು ಇರುವುದಿಲ್ಲವೆಂದು ಅಭಿಪ್ರಾಯವನ್ನು ನೀಡಿರುತ್ತಾರೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ಮತ್ತೊಮ್ಮೆ ಚರ್ಚಿಸಿ, ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಯಥಾಸ್ಥಿತಿ ಕಾಪಾಡುವಂತೆ (Status quo Maintain) ಆದೇಶಿಸಿರುವುದರಿಂದ ಈ ಬಗ್ಗೆ ಎರಡನೇ ಬಾರಿಗೆ ಮತ್ತೊಮ್ಮೆ ನುರಿತ ವಕೀಲರಿಂದ ಕಾನೂನು ಸಲಹೆಯನ್ನು ಪಡೆದುಕೊಂಡು ಅದರಂತೆ ಕ್ರಮ ವಹಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

| | |
|---|---|
| ಸಹಿ/– | ಸಹಿ/– |
| (ಶ್ರೀ ಎ.ಸಿ.ದೇವಯ್ಯ) | (ಕು॥ ಎಂ.ಎನ್. ಸೌಮ್ಯ) |
| ಅಧ್ಯಕ್ಷರು, | ಆಯುಕ್ತರು(ಪ್ರ), |
| ನಗರಾಭಿವೃದ್ಧಿ ಪ್ರಾಧಿಕಾರ, | ನಗರಾಭಿವೃದ್ಧಿ ಪ್ರಾಧಿಕಾರ, |
| ಮಡಿಕೇರಿ. | ಮಡಿಕೇರಿ. |